Scanned

# ಕರ್ನಾಟಕ ಸರಕಾರದ ನಡುವಳಿಕೆಗಳು

ವಿಷಯ:- ಬಾಗಲಕೋಟ ಜಿಲ್ಲೆಯ ಬೀಳಗಿ ತಾಲೂಕಿನ ಕುಂದರಗಿ ಗ್ರಾಮದ ಕೆಲವು ಜಮೀನುಗಳು ಕೃ.ಮೇ.ಯೋ. ಅಡಿ ಆಲಮಟ್ಟಿ ಜಲಾಶಯದ ಹಿನ್ನೀರಿನ ಮಟ್ಟ ಎಫ್.ಆರ್.ಎಲ್. 519.60-524.256 ಮೀ. ವ್ಯಾಪ್ತಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ (ನೀರಾವರಿ ಯೋಜನೆ) ಭೂಸ್ವಾಧೀನತೆಯ ಪುನರ್‌ವಸತಿ & ಪುನರ್‌ವ್ಯವಸ್ಥೆ ಅಧಿನಿಯಮ-2013ರನ್ವಯ ಕರಡು ಯಾದಿಯನ್ನು ಅನುಮೋದಿಸುವ ಕುರಿತು.

ಓದಲಾಗಿದೆ:- 1} ಭೂಸ್ವಾಧೀನ ಕಾಯ್ದೆ 2013ರ ಕಲಂ 11(1)ರ ಕ್ರಮಾಂಕ:ಎಲ್‌ಎಕ್ಯೂ:ಎಸ್‌ಆರ್:08: 2015-16ಕ್ಕೆ ಅನುಸಾರವಾಗಿ ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ:ವಿಜಿಬಾ:ಭೂಸ್ವಾ: ಸಿಆರ್-19/2015-16 ದಿನಾಂಕ:31-08-2015. ಹಾಗೂ ಕಲಂ 11(1)ರ ಅಧಿಸೂಚನೆ ಗೆಜೆಟ್ ಪ್ರಕಟಣೆಗೊಂಡ ಸಂಖ್ಯೆ:770 ದಿನಾಂಕ:08-09-2015.

2} ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಕುರಿತು.

3} ಸರ್ಕಾರದ ಆದೇಶ ಸಂಖ್ಯೆ:ಕಂಇ:18:ಆರ್‌ಇಹೆಚ್:2014:ಬೆಂಗಳೂರು ದಿನಾಂಕ:06-02-2014

4} ಈ ಕಾರ್ಯಾಲಯದ ಪತ್ರ ಸಂಖ್ಯೆ:ಕಂಇ/ಭೂಸ್ವಾ-1/ವಿನಿವ-64/16-17/402ಎ ದಿನಾಂಕ: 08-05-2017.

5} ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಬೀಳಗಿ. ಇವರ ಪತ್ರ ಸಂಖ್ಯೆ: ದಿನಾಂಕ: 11-07-2017.

6} ಮಹಾ ವ್ಯವಸ್ಥಾಪಕರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃ.ಮೇ.ಯೋ. ನವನಗರ,ಬಾಗಲಕೋಟ ಇವರ ಕಲಂ 17(2)ರಡಿ ಶಿಫಾರಸ್ಸು ದಿನಾಂಕ20-07-2017

*******

ಆದೇಶ ಸಂ:ಮವ್ಯ/ಪುಪು/ಆರ್‌ಆರ್‌ಎಪಿ/ಬೀಳಗಿ/ಸಿಆರ್- 71 /2017-18 ದಿನಾಂಕ: 29 -07-2017.

ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಬೀಳಗಿ ಇವರಿಂದ ಬಂದಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ಬಾಗಲಕೋಟ ಜಿಲ್ಲೆಯ ಬೀಳಗಿ ತಾಲೂಕಿನ ಕುಂದರಗಿ ಗ್ರಾಮದ ಕೆಲವು ಜಮೀನುಗಳು ಕೃ.ಮೇ.ಯೋ. ಅಡಿ ಆಲಮಟ್ಟಿ ಜಲಾಶಯದ ಹಿನ್ನೀರಿನ ಮಟ್ಟ ಎಫ್.ಆರ್.ಎಲ್. 519.60-524.256 ಮೀ. ವ್ಯಾಪ್ತಿಯಲ್ಲಿ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ (ನೀರಾವರಿ ಯೋಜನೆ) ಜಮೀನಿನ ಭೂಮಾಲೀಕರಿಗೆ ಜೆ.ಎಂ.ಸಿ. ಪ್ರಕಾರ ಒಟ್ಟು: 219ಎ-23ಗುಂ ಕ್ಷೇತ್ರಕ್ಕೆ ನೂತನ ಕಾಯ್ದೆ ಕಲಂ 16(2) ನೇದ್ದರ ಮೇರೆಗೆ ಗಣತಿ ಕಾರ್ಯವನ್ನು ಕೈಗೊಂಡು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಯಾದಿಯನ್ನು ತಯಾರಿಸಿದ್ದಾರೆ.

ವಿಶೇಷ ಭೂಸ್ವಾಧೀನಾಧಿಕಾರಿ, ಕೃ.ಮೇ.ಯೋ. ಬೀಳಗಿ ಇವರನ್ನು ಈ ಯೋಜನೆಗೆ ಕಾರ್ಯವನ್ನು ನಿರ್ವಹಿಸಲು ನೇಮಿಸಲಾಗಿದೆ ಮತ್ತು ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಆದೇಶಿಸುವ ಅಧಿಕಾರವನ್ನು ನೀಡಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಅನುಗುಣವಾಗಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು ಹಾಗೂ ಭೂಸ್ವಾಧೀನ ಕಾಯ್ದೆ 2013ರ ಕಲಂ 45 ರಡಿ ಪ್ರಕರಣದಲ್ಲಿ ಸದರಿ ಭೂಸ್ವಾಧೀನ ಪ್ರಕರಣದಲ್ಲಿ ಒಳಗೊಂಡ ಕ್ಷೇತ್ರವು 100 ಎಕರೆಗಿಂತ ಹೆಚ್ಚಿಗೆ ಇರುವುದರಿಂದ ಅನ್ವಯಿಸುತ್ತದೆ.

ನೂತನ ಭೂಸ್ವಾಧೀನ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕಾಯ್ದೆ 2013ರ ಕಲಂ 16(3)ರಡಿ ತಯಾರಿಸಲಾದ ಗಣತಿ ಯಾದಿಯಲ್ಲಿ ಜೆ.ಎಂ.ಸಿ. ಪ್ರಕಾರ ಒಟ್ಟು ಕ್ಷೇತ್ರ: 219ಎ-23ಗುಂ ಕ್ಷೇತ್ರದಲ್ಲಿ ಕುಂದರಗಿ ಗ್ರಾಮಕ್ಕೆ ಸಂಬಂಧಿಸಿದಂತೆ ಒಟ್ಟು ಒಂದನೂರಾ ಐವತ್ತೊಂದು (151) ಕುಟುಂಬಗಳು ಮಾತ್ರ ಭೂಮಿಯನ್ನು ಕಳೆದುಕೊಳ್ಳುತ್ತಿದ್ದು,

...2)

ಅದರಲ್ಲಿ ನಲವತ್ತಮೂರು (43) ಕುಟುಂಬಗಳು ಮಾತ್ರ ಅವರು ಹೊಂದಿದ ಒಟ್ಟು ಕ್ಷೇತ್ರಕ್ಕಿಂತ ಬಹುಪಾಲು ಭೂಮಿಯನ್ನು ಕಳೆದುಕೊಳ್ಳುತ್ತಿದ್ದು, ಅವರ ಪ್ರಧಾನ ಜೀವನಾಧಾರ ನಷ್ಟತೆಯನ್ನು ಕಳೆದುಕೊಳ್ಳುವುದರಿಂದ, ಅನುಸೂಚಿ-31, 2ನೇ ವಿವರ ಪಟ್ಟಿ ಅನುಸಾರ ಜೀವನಾಧಾರ ಸೌಲಭ್ಯವನ್ನು ನೀಡಲು ಜೆ.ಎಂ.ಸಿ. ಪ್ರಕಾರ ಪುನರ್‌ವಸತಿ ಮತ್ತು ಪುನರ್‌ನಿರ್ಮಾಣದ ಕ್ರಿಯಾ ಯೋಜನೆಯನ್ನು ತಯಾರಿಸಿರುತ್ತಾರೆ. ಇನ್ನುಳಿದ ಯಾವುದೇ ಕುಟುಂಬವು ಪ್ರಧಾನ ಜೀವನೋಪಾಯಕ್ಕೆ ನಷ್ಟ ಹೊಂದುವುದಿಲ್ಲ ಎಂಬುದನ್ನು ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಬೀಳಗಿರವರು ಕೂಲಂಕುಷವಾಗಿ ಪರಿಶೀಲಿಸಿ ನೂತನ ಕಾಯ್ದೆರಡಿ ಕಲಂ 16(6)ರಡಿ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಯ ಕರಡು ಯಾದಿಯನ್ನು ತಯಾರಿಸಿ ದೃಢಪಡಿಸಿಕೊಂಡಿದ್ದಾರೆ.

ನೂತನ ಭೂಸ್ವಾಧೀನ ಕಾಯ್ದೆ-2013ರನ್ವಯ, ಸಾರ್ವಜನಿಕ ವಿಚಾರಣೆ ಸಮಯದಲ್ಲಿ ಬಾಧಿತ ಕುಟುಂಬಗಳು ಜಮೀನು/ಭೂಮಿ ಕುರಿತು ಬೆಲೆ ನಿಗದಿಪಡಿಸಲು ತಿಳಿಸಿರುತ್ತಾರೆ. ಇದು ಭೂಸ್ವಾಧೀನ ಪರಿಹಾರ 1ನೇ ಪರಿಶಿಷ್ಟಕ್ಕೆ ಸಂಬಂಧಿಸಿರುವುದರಿಂದ, ಪ್ರಸ್ತುತ ಕರಡು ಯಾದಿ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ 2ನೇ ಪರಿಶಿಷ್ಟಕ್ಕೆ ಒಳಪಟ್ಟಿದ್ದು ಈ ಕರಡು ಪುನರ್‌ವಸತಿ ಯಾದಿಯ ಕುರಿತು ಯಾವುದೇ ಆಕ್ಷೇಪಣೆಗಳು ವ್ಯಕ್ತಪಡಿಸಿರುವುದಿಲ್ಲ.

ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ಬೀಳಗಿ ಇವರು ತಯಾರಿಸಿರುವ ಯಾದಿಯ ಶಿಫಾರಸ್ಸುಗಳನ್ನು ಆಧರಿಸಿ, ಬಾಧಿತ ಕುಟುಂಬಗಳಿಗೆ, ಕುಟುಂಬ ಸದಸ್ಯರಿಗೆ ಪುನರ್‌ವಸತಿ ಹಕ್ಕುಗಳನ್ನು ಒದಗಿಸುವ ಕ್ರಿಯಾ ಯೋಜನೆಯನ್ನು ನೂತನ ಭೂಸ್ವಾಧೀನ ಕಾಯ್ದೆ 2013ರ ಕಲಂ 84 ರನ್ವಯ ಸೌಲಭ್ಯ ಪಡೆಯುವ ಕುಟುಂಬವು ಯಾವುದೇ ರೀತಿಯಲ್ಲಿ ಸುಳ್ಳು ಮಾಹಿತಿ ನೀಡಿದಲ್ಲಿ, ಇದೇ ಕಾಯ್ದೆಯ ಕಲಂ 84 (1) (2) ಹಾಗೂ (3) ರನ್ವಯ ಶಿಕ್ಷೆಗೆ ಗುರಿಪಡಿಸಲಾಗುವುದೆಂಬ ಷರತ್ತಿಗೆ ಒಳಪಟ್ಟು ಭೂಸ್ವಾಧೀನ ಕಾಯ್ದೆ ಕಲಂ 18ರಡಿ ಈ ಕೆಳಗಿನ ಷರತ್ತುಗಳನ್ನು ಕಟ್ಟು ನಿಟ್ಟಾಗಿ ಅನುಸರಿಸುವ ಮಾರ್ಗಸೂಚಿ ವಿಧಿಸುವ ಮೂಲಕ ಅನುಮೋದಿಸಲಾಗಿದೆ.

1. ಐತೀರ್ಪು ರಚಿಸುವ ಸಂದರ್ಭದಲ್ಲಿ ಜೀವನಾಧಾರ ಸೌಲಭ್ಯ ಪಡೆಯುವ ಕುಟುಂಬವು ಕಳೆದುಕೊಳ್ಳುತ್ತಿರುವ ಜಮೀನು ಹೊರತುಪಡಿಸಿ, ಇತರೆ ಪ್ರದೇಶದಲ್ಲಿ ಜಮೀನು ಅಥವಾ ಇತರೇ ಯಾವುದೇ ರೀತಿಯ ಆದಾಯ ಹೊಂದಿರುವುದಿಲ್ಲವೆಂಬುದರ ಬಗ್ಗೆ ಶಪಥ ಪತ್ರ ಹಾಗೂ ಕಂದಾಯ ದಾಖಲೆ (ಕುಟುಂಬ ಭೂಹಿಡುವಳಿ ಪ್ರಮಾಣ ಪತ್ರ) ಪಡೆಯುವುದು. ಹಾಗೂ ಈ ಕುರಿತು ಆಡಳಿತಾಧಿಕಾರಿಗಳು/ವಿಶೇಷ ಭೂಸ್ವಾಧೀನಾಧಿಕಾರಿಗಳು ಪರಿಶೀಲಿಸುವುದು.
2. ಕಾಯ್ದೆಯ ಕಲಂ 41(6)ರಡಿ ಅನುಸೂಚಿತ ಪಂಗಡ ಹಾಗೂ ಬುಡಕಟ್ಟು ಜನಾಂಗಗಳಿಗೆ ಭೂಸ್ವಾಧೀನ ಪ್ರಕರಣಗಳು ಒಳಪಟ್ಟಿದ್ದಲ್ಲಿ ಸ್ವಾಧೀನದ ಸ್ವತ್ತುಗಳು ಶೇಕಡಾ 1/3 ರಷ್ಟು ಪರಿಹಾರವನ್ನು ಸ್ವಾಧೀನ ಪೂರ್ವದಲ್ಲಿ ಬಾಧಿತ ಕುಟುಂಬಗಳಿಗೆ ಪಾವತಿಸುವುದು.
3. ಬಾಧಿತ ಕುಟುಂಬಗಳ ಸದಸ್ಯರು ಇಚ್ಛಿಸಿದಲ್ಲಿ ಅವರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಲು ಸ್ಥಳೀಯ ಸರ್ಕಾರ ಸಂಸ್ಥೆಗಳ ಸಹ-ಭಾಗಿತ್ವದಲ್ಲಿ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಪ್ರತಿ ಕುಟುಂಬಕ್ಕೆ ಉದ್ಯೋಗವನ್ನು ಒದಗಿಸಲು ಆಡಳಿತಾಧಿಕಾರಿಗಳು ಖಚಿತಪಡಿಸಿಕೊಳ್ಳುವುದು.
4. ಬಾಧಿತ ಕುಟುಂಬದ ನಿರುದ್ಯೋಗಿ ಯುವಕ/ಯುವತಿಯರಿಗೆ, ಕುಶಲ ಕರ್ಮಿಗಳಿಗೆ, ವ್ಯಾಪಾರಸ್ಥರಿಗೆ, ಹಾಗೂ ಕೃಷಿ ಕಾರ್ಮಿಕರಿಗೆ ಅವರ ಆದಾಯ ವೃದ್ಧಿಸುವ ಕೌಶಲ್ಯ ತರಬೇತಿಗಳನ್ನು ಸರ್ಕಾರಿ/ಸರ್ಕಾರೇತರ ಸಹ ಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರೊಂದಿಗೆ ಚರ್ಚಿಸಿ ಆಡಳಿತಾಧಿಕಾರಿಗಳು ಅಗತ್ಯ ಕ್ರಮ ವಹಿಸುವುದು.
5. ಯೋಜನಾ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವಂತಹ ಸ್ವ ಸಹಾಯ ಸಂಸ್ಥೆಗಳ ಸೇವೆಯನ್ನು ಬಾಧಿತ ಕುಟುಂಬಗಳ ಶ್ರೇಯೋಭಿವೃದ್ಧಿಗೆ ವಿಸ್ತರಿಸುವ ಮೂಲಕ ಸಂಬಂಧಿಸಿದ ಇಲಾಖೆಯಿಂದ ಪ್ರೋತ್ಸಾಯಿಸುವಂತಹ ಯೋಜನೆಯ ಸೌಲಭ್ಯಗಳನ್ನು ಒದಗಿಸಲು ಆಡಳಿತಾಧಿಕಾರಿಗಳು ಶ್ರಮಿಸುವದೊಂದಿಗೆ, ಮೇಲ್ವಿಚಾರಣೆ ಮಾಡುವುದು.

..3)